ಶ್ರೀ ಜೆ.ಸಿ. ಮಾಧುಸ್ವಾಮಿ :- ಸನ್ಮಾನ್ಯ ನಾಣಯ್ಯನವರಿಗೆ ಆ ವಿಷಯೆಲ್ಲಾ ಗೊತ್ತಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದರೆ ನಾಣಯ್ಯನವರು ಸುಮ್ಮನೆ ಕುಳಿತಿರುದದನ್ನು ನೋಡಿದರೆ ನನಗೆ ನೋವಾಗುತ್ತಿದೆ

ಶ್ರೀ ಎಂ.ಸಿ. ನಾಣಯ್ಯ :- ಮಾನ್ಯ ಮಾದಪ್ಪನವರು ಕೇಳಿರುವಂಥ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಸ್ವಲ್ಪ ಮಟ್ಟಿಗೆ ಆ ಆಶ್ರಯ ಮನೆಗಳನ್ನು ಕಟ್ಟತಕ್ಕಂಥ ಸಮಯದಲ್ಲಿ ದುರುಪಯೋಗವಾಗಿದೆ. ಹಣವನ್ನು ಡ್ರಾ ಮಾಡಿದ್ದಾರೆ. ಮನೆಗಳನ್ನು ಕಟ್ಟಲಿಲ್ಲ. ಈ ತರಹ: ಆಗಿರುವುದರಿಂದ ಜಿಲ್ಲಾ ಪಂಚಾಯಿತಿಯವರು ಒಂದು ರಿಸೆಲ್ಯೂಷನ್ ಮಾಡಿ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದಾರೆ. ನಾನು ಆ ವಿಷಯವನ್ನು ಅವರ ಗಮನಕ್ಕೆ ತರುತ್ತೇನೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸದಸ್ಯರು ಹೇಳುವಂಥದ್ದು , ಮಾನ್ಯ ವಸತಿ ಸಚಿವರು ಮಾಹಿತಿ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ನಾನೇಕೊಡುತ್ತೇನೆ. ಈ ಕೆಲಸವನ್ನು ನಾವು ನೀವು ಒಟ್ಟಾರೆ ಸೇರಿ ಮಾಡೋಣ.

(ಅ) <u>ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು</u>

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯಲ್ಲಿನ 10 ಪ್ರಶ್ನೆ ಗಳ ಪೈಕಿ 7 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಸುಳ್ಯ ತಾಲ್ಲೂಕಿನಲ್ಲಿ ನಿರ್ಮಿಸಿರುವ ಆಶ್ರಯ ಮನೆಗಳು

141 (242) ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಆಶ್ರಯ ಯೋಜನೆ ಜಾರಿಗೆ ಬಂದಾಗಿನಿಂದ ಕಟ್ಟಲಾಗಿರುವ ಮನೆಗಳ ಒಟ್ಟು ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಆ) ಆ ಪೈಕಿ ಸುಳ್ಯ ತಾಲ್ಲೂಕಿನಲ್ಲಿ ಕಟ್ಟಿರುವ ಮನೆಗಳ ಸಂಖ್ಯೆ ಎಷ್ಟು?

ಇ) 1997-98ನೇ ಸಾಲಿನಲ್ಲಿ ಪ್ರತಿ ತಾಲ್ಲೂಕಿಗೆ ಮನೆಗಳನ್ನು ಕಟ್ಟಲು ಗುಡಿ ಹೊಂದಿರುವ ಸಂಖ್ಯೆ ಎಷ್ಟು? ಹಾಗೂ ಎಷ್ಟು ಮನೆಗಳನ್ನು ಪೂರ್ಣ ಗೊಳಿಸಲಾಗಿದೆ; ಇನ್ನು ಕಟ್ಟದೆ ಬಾಕಿ ಉಳಿದಿರುವ ಮನೆಗಳ ಸಂಖ್ಯೆ ಎಷ್ಟು?

ಈ) ಸುಳ್ಯ ತಾಲ್ಲೂಕಿನಿಂದ ಆಶ್ರಯ ಯೋಜನೆಯಡಿ ಮನೆಗಳನ್ನು ಪಡೆಯಲು ಇದುವರೆಗೂ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ವರ್ಷ 1993-94 94-95 95-96 96-97 97-98 ಒಟ್ಟು
369 394 147 48 16 974

ಕ್ರ ಸಂ	ತಾಲ್ಲೂಕು	ಗುರಿ	ಪೂರ್ಣಗೊಳ್ಳಲಾದ ಮನೆಗಳ ಸಂಖ್ಯೆ	ಬಾಕಿಯಿರುವ ಮನೆಗಳ ಸಂಖ್ಯೆ
1	2	3	4	5
1.	ಮಂಗಳೂರು	375	798	375
2.	ಬಂಟ್ವಾಳ	375	418	372
3.	ಪುತ್ತೂರು	375	196	274
4.	ಸುಳ್ಯ	275	130	250
5.	ಬೆಳ್ತಂಡಿ	275	142	275
6.	ಕಾರ್ಕಳ	375	255	375
7.	ಕುಂದಾಪುರ	375	200	355
8.	ಉಡುಪಿ	575	330	575
	ಒಟ್ಟು	2900	2469	2860

ಈ ವರ್ಷ ಪೂರ್ಣಗೊಂಡ ಹಿಂದಿನ ಸಾಲಿನ ಮನೆಗಳು ಸೇರಿವೆ.

ಈ) 475

ಮೈಸೂರ್ ನಗರ ವ್ಯಾಪ್ತಿಯಲ್ಲಿ ಆಶ್ರಯ ಯೋಜನೆಯ ಪ್ರಗತಿ

143 (246) ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರ ವ್ಯಾಪ್ತಿಯಲ್ಲಿ ಆಶ್ರಯ ಯೋಜನೆ ಕಾರ್ಯಕ್ರಮವು ಕುಂಠಿತವಾಗಿದ್ದು ಯಾವ ಪ್ರಗತಿಯು ಕಾಣದೆ ಬರಿ ಯೋಜನೆಯಾಗಿ ಉಳಿದಿದೆಯೇ; ಈ ಯೋಜನೆ ಪ್ರಾರಂಭಿಸಲು ಯಾವ ಯಾವ ಸ್ಥಳಗಳಲ್ಲಿ ಆಶ್ರಯ ಯೋಜನೆ ಸಭೆ ನಡೆಸಲಾಗಿದೆ?

ಆ) ನಿವೇಶನ ನೀಡಲು ಜಮೀನು ಭೂಸ್ವಾಧೀನ ಮಾಡಲಾಗಿದೆಯೇ?

ಇ) ಹಾಗಿದ್ದಲ್ಲಿ ಫಲಾನುಭವಿಗಳನ್ನು ಗುರುತಿಸಲು ಅರ್ಜಿ ಕರೆಯಲಾಗಿದೆಯೇ?